

ಎರಡು ಕೃತಿಗಳನ್ನು 'ರಮ್ಯ ಕಥಾನಕ'ಗಳೆಂದು ಗುರುತಿಸಿ, ಆಧುನಿಕ ಕನ್ನಡ ಗದ್ಯವು ರೂಪುಗೊಳ್ಳುತ್ತಿದ್ದ ಬಗೆಯನ್ನು ತಿಳಿಯಲು ಅಧ್ಯಯನ ಮಾಡಬಹುದಾಗಿದೆ. ಅಲ್ಲದೆ, 'ಕಲಾವತಿ' ಪರಿಣಯದ ಕಥೆಯನ್ನು ಹೋಲುವ ಕಥೆಯೊಂದು ಬೊಕಾಚಿಯೋನ 'ಡಿಕೆಮರಾನ್'ನಲ್ಲಿ ಇರುವುದರಿಂದ ಮೂಲವನ್ನು ಅನ್ವೇಷಿಸುವ ಅಧ್ಯಯನವೂ ಆಗಬೇಕಾಗಿದೆ.

'ಮುದ್ರಾಮಂಜೂಷ'ವನ್ನು ಅದರ ಕೃತಿಕಾರನು ತನ್ನ ಕಾಲದ ವಿಚಾರಗಳನ್ನು ಹೊದಿಸಿ, ವಿಸ್ತರಿಸಿ, 'ಇತಿಹಾಸದ ಆಧಾರದಿಂದ' ಗದ್ಯ ಕಥಾನಕವಾಗಿ ರಚಿಸಿದುದನ್ನು ಪರಿಗಣಿಸಿ ಮೊದಲನೆಯ ಆಧುನಿಕ ಗದ್ಯ ಕೃತಿಯೆಂದು ಒಪ್ಪಬಹುದಾಗಿದೆ. ಐತಿಹಾಸಿಕ ಕಾದಂಬರಿಗಳು ಕಾಲ್ಪನಿಕವಾಗಿರಲು ಸಾಧ್ಯವಿಲ್ಲ. ಅದರಂತೆ, ಮುಮ್ಮಡಿಯವರ ಆಸ್ಥಾನದಲ್ಲಿದ್ದ ಕೆಂಪುನಾರಾಯಣ ಶಾಸ್ತ್ರಿಗಳು ವಿಶಾಖದತ್ತನ 'ಮುದ್ರಾ ರಾಕ್ಷಸ' ಎಂಬ ಸಂಸ್ಕೃತ ನಾಟಕವನ್ನು ಆಧರಿಸಿ, ಮೈಸೂರಿನ ಆ ಕಾಲದ ರಾಜಕೀಯ ಸ್ಥಿತ್ಯಂತರಗಳನ್ನು ಧ್ವನಿಸುವಂತೆ ರಚಿಸಿದ ಬಹಳ ವಿಶಿಷ್ಟವಾದ ಕೃತಿಯಿದು.

ಇದರ ಭಾಷೆಯು ಆಧುನಿಕವಾಗಿದೆ. ನೋಡಿ – 'ಎಲೈ ಚಾರನೇ, ಸುಖದಿಂದ ಬಂದೆಯಾ ಕುಳ್ಳಿರು. ಚಂದ್ರಗುಪ್ತನು ಪಾಟಲೀಪುರಮಂ ಪ್ರವೇಶಿಸಿದ ಬಳಿಕ ಮಲಯಕೇತು ಓಡಿಬಂದ ನಂತರದಲ್ಲಿ ಪಟ್ಟಣದೊಳಗೇನೇನು ವಿಶೇಷವು ನಡೆಯಿತು? ಎಂದು ಕೇಳಲು –' (ಪುಟ 258) (1985 ರ ಮರುಮುದ್ರಣ). ಇದರಲ್ಲಿ 18 ಅಧ್ಯಾಯಗಳು (ಆಶಯಗಳು – ಎನ್ನುವುದು ಅಧ್ಯಾಯ ಎನ್ನುವುದಕ್ಕೆ ಪರ್ಯಾಯವಾಗಿ ಇಲ್ಲಿ ಬಳಕೆಯಾಗಿರುವ ಪದ) ಸುಮಾರು 350 ಪುಟಗಳಷ್ಟು ದೀರ್ಘವಾಗಿ ವಿಸ್ತರಿಸಿಕೊಂಡಿವೆ.

ಈಗಲೇ ಸೂಚಿಸಿದಂತೆ ಈ ಕೃತಿಗೆ ಮೂಲವಾಗಿರುವುದು ವಿಶಾಖದತ್ತನ ನಾಟಕ. ಅದರಲ್ಲಿರುವುದು ಚಾಣಕ್ಯ ಚಂದ್ರಗುಪ್ತರ ಕಥೆಯಾಗಿದೆ. ಚಾಣಕ್ಯನು ದುಷ್ಟರಾದ ನಂದರನ್ನು ಪದಚ್ಯುತಗೊಳಿಸಿ ಚಂದ್ರಗುಪ್ತನನ್ನು ಸಿಂಹಾಸನಕ್ಕೇರಿಸುತ್ತಾನೆ. ತನಗೆ ಮಂತ್ರಿಯ ಅಧಿಕಾರ ಇಷ್ಟವಿಲ್ಲದ ಕಾರಣ ಚಂದ್ರಗುಪ್ತನಿಗೆ ಯೋಗ್ಯನಾದ ಮಂತ್ರಿಯೆಂದರೆ ನಂದರ ಕಾಲದಲ್ಲಿ ಮಂತ್ರಿಯಾಗಿದ್ದು, ರಾಜ್ಯಕ್ಕಾಗಿ ದಿಟ್ಟತನದಿಂದ ಮತ್ತು ಬಹಳ ಬುದ್ಧಿವಂತಿಕೆಯಿಂದ ಸಂಚು, ಒಳಸಂಚುಗಳನ್ನು ಹೂಡುತ್ತಾ ಅವರನ್ನು ರಕ್ಷಿಸುತ್ತಿದ್ದ ರಾಕ್ಷಸ ಎಂಬ ಹೆಸರಿನ ಅಮಾತ್ಯನೇ ಎಂದು ನಿರ್ಧರಿಸಿ, ಅವನನ್ನು ಹುಡುಕಿಸಿ ಅವನನ್ನೇ